

**ಡಾ. ಬಿ ವಿ ವಸಂತಕುಮಾರ್**
ಅಧ್ಯಕ್ಷರು

ಡಾ. ಬಿ.ವಿ. ವಸಂತಕುಮಾರ್ ಅವರು ಮೂಲತಃ ದಾವಣಗೆರೆ ಜಿಲ್ಲೆಯ ಚನ್ನಗಿರಿ ತಾಲ್ಲೂಕಿನ ತಿಪ್ಪಗೊಂಡನಹಳ್ಳಿಯವರು. ಇವರು 13–02–1968ರಲ್ಲಿ ಜನಿಸಿದರು. ತಂದೆ ಬಿ. ವೀರಭದ್ರಪ್ಪನವರು ಸಾಗರದ ಎಲ್.ಬಿ. ಕಾಲೇಜಿನಲ್ಲಿ ಕನ್ನಡ ಅಧ್ಯಾಪಕರಾಗಿದ್ದರು. ಅವರೂ ಕನ್ನಡದ ಪ್ರಸಿದ್ಧ ಸಂಶೋಧಕರು ಮತ್ತು ಸಾಹಿತಿಗಳು. ಅವರ 'ಪಂಪ ಪದಪ್ರಪಂಚ ಭಾಗ–1 ಮತ್ತು ಭಾಗ–2' ಕೃತಿಗಳು ಡಿ.ಎಲ್.ಎನ್. ಪರಂಪರೆಯ ಸಾಲಿನಲ್ಲಿ ನಿಲ್ಲುವ ಕೃತಿಗಳೆಂದು ವಿದ್ವಾಂಸರಿಂದ ಮನ್ನಣೆ ಗಳಿಸಿವೆ. ತಾಯಿ ಕಾಂತಮ್ಮ ಅವರು ಹಾಗೂ ಅಜ್ಜಿ ಗಂಗಮ್ಮ ಅವರು ಆರ್ಥಿಕವಾಗಿ ಪತನಗೊಂಡ ಬದುಕನ್ನು ಮಕ್ಕಳು ಮೊಮ್ಮಕ್ಕಳ ಬದುಕನ್ನು ಮೇಲೆತ್ತಿ ನಿಲ್ಲಿಸಿದ ಮಹಾಮಾತೆಯರಾಗಿದ್ದಾರೆ ಎಂಬುದು ಆ ಗ್ರಾಮದ ಪ್ರತಿಯೊಬ್ಬರ ಅನುಭವದ ಅನಿಸಿಕೆ.

ತಿಪ್ಪಗೊಂಡನಹಳ್ಳಿಯ ಗೊರಣ್ಣರ ಮನೆತನದ ಬಿ.ವಿ. ವಸಂತಕುಮಾರ್ ತಮ್ಮ ಪ್ರಾಥಮಿಕ ಮಾಧ್ಯಮಿಕ ಶಿಕ್ಷಣವನ್ನು ತಮ್ಮ ಹಳ್ಳಿಯಲ್ಲಿ ಮುಗಿಸಿದರು. ಪ್ರೌಢಶಾಲೆ ಶಿಕ್ಷಣವನ್ನು ಚಿತ್ರದುರ್ಗದ ಸಂಪಿಗೆ ಸಿದ್ಧೇಶ್ವರ ಪ್ರೌಢಶಾಲೆಯಲ್ಲಿ ಪೂರೈಸಿದರು. ಪಿಯುಸಿ ಹಾಗೂ ಬಿ.ಎ. ಪದವಿಯನ್ನು ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜಿನಲ್ಲಿ ಓದಿದರು. 1988ರಲ್ಲಿ ಬಿ.ಎ. ಪದವಿಯನ್ನು ಮೈಸೂರು ವಿಶ್ವವಿದ್ಯಾನಿಲಯದಿಂದ ಐದನೆಯ ಶ್ರೇಣಿ (rank)ಯೊಂದಿಗೆ ಪಡೆದರು. ಅನಂತರ ಮೈಸೂರಿನ ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಪ್ರಥಮ ಶ್ರೇಣಿ (rank), ನಾಲ್ಕು ಚಿನ್ನದ ಪದಕ ಹಾಗೂ ಮೂರು ನಗದು ಬಹುಮಾನಗಳೊಂದಿಗೆ ಕನ್ನಡ ಎಂ.ಎ. ಪದವಿಯನ್ನು 1990ರಲ್ಲಿ ಗಳಿಸಿದರು. 1995ರಲ್ಲಿ ಡಾ. ಆರ್. ರಾಮಕೃಷ್ಣ ಅವರ ಮಾರ್ಗದರ್ಶನದಲ್ಲಿ 'ಕೈಲಾಸಂ ಕನ್ನಡ ಒಂದು ಅಧ್ಯಯನ' ಎಂಬ ವಿಷಯಕ್ಕೆ ಮೈಸೂರು ವಿಶ್ವವಿದ್ಯಾನಿಲಯದಿಂದ ಪಿಹೆಚ್.ಡಿ. ಪದವಿಯನ್ನು ಪಡೆದಿದ್ದಾರೆ.

1990ರಿಂದ ಚಿತ್ರದುರ್ಗದ ಸರ್ಕಾರಿ ಕಲಾ ಕಾಲೇಜು, ಮೈಸೂರಿನ ಮಹಾರಾಜ ಕಾಲೇಜುಗಳಲ್ಲಿ ಅತಿಥಿ ಉಪನ್ಯಾಸಕರಾಗಿ ಕಾರ್ಯನಿರ್ವಹಿಸುತ್ತಿದ್ದ ಇವರು 1992ರಲ್ಲಿ ಕರ್ನಾಟಕ ಲೋಕಸೇವಾ ಆಯೋಗದಿಂದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಕನ್ನಡ ಅಧ್ಯಾಪಕರಾಗಿ ಆಯ್ಕೆಯಾಗಿ ಈವರೆಗೆ ಶಿಕಾರಿಪುರ, ಕೊಣನೂರು, ಕಡೂರು, ಮೈಸೂರು, ಮಂಡ್ಯಗಳಲ್ಲಿ ಕಾರ್ಯನಿರ್ವಹಿಸಿ ಪ್ರಸ್ತುತ ಮೈಸೂರಿನ ಮಹಾರಾಣಿ ಮಹಿಳಾ ಕಲಾಕಾಲೇಜಿನ ಕನ್ನಡ ಸ್ನಾತಕೋತ್ತರ ಅಧ್ಯಯನ ಕೇಂದ್ರದಲ್ಲಿ ಸಹ ಪ್ರಾಧ್ಯಾಪಕರಾಗಿ ಮತ್ತು ವಿಭಾಗದ ಮುಖ್ಯಸ್ಥರಾಗಿ ಸೇವೆ ಸಲ್ಲಿಸುತ್ತಿದ್ದಾರೆ.

**ನಿರ್ವಹಿಸಿರುವ ಜವಾಬ್ದಾರಿಗಳು :**

1995ರಿಂದ 2002ರವರೆಗೆ ಶಿಕಾರಿಪುರದ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್.ಎಸ್.ಎಸ್. ಕಾರ್ಯಕ್ರಮಾಧಿಕಾರಿ. 2004–05ರಲ್ಲಿ ಕಡೂರಿನ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಎನ್.ಎಸ್.ಎಸ್.

ಅಧಿಕಾರಿ. 2005–06ರಲ್ಲಿ ಚಿಕ್ಕಮಗಳೂರು ಜಿಲ್ಲಾ ಎನ್.ಎಸ್.ಎಸ್. ನೋಡಲ್ ಅಧಿಕಾರಿ. ಕುವೆಂಪು ವಿಶ್ವವಿದ್ಯಾನಿಲಯದ ಕನ್ನಡ ಅಧ್ಯಾಪಕರ ವೇದಿಕೆಯ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಣೆ.

2008ರಲ್ಲಿ ಮೈಸೂರು ದಸರಾ ಮಹೋತ್ಸವದ ದಸರಾ ಕವಿಗೋಷ್ಠಿ ಉಪಸಮಿತಿಯ ಉಪಾಧ್ಯಕ್ಷರಾಗಿ, 2009 ಮತ್ತು 2010ರಲ್ಲಿ ಅಧ್ಯಕ್ಷರಾಗಿ ಕವಿಗೋಷ್ಠಿಗಳ ಆಯೋಜನೆ. 2009ರಿಂದ 2012ರವರೆಗೆ ಹಂಪಿಯ ಕನ್ನಡ ವಿಶ್ವವಿದ್ಯಾನಿಲಯದ ಕಾರ್ಯಕಾರಿ ಸಮಿತಿ (ಸಿಂಡಿಕೇಟ್) ಸದಸ್ಯರಾಗಿ, ಇದೇ ಅವಧಿಯಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯರಾಗಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಪುಸ್ತಕ ಆಯ್ಕೆ ಸಮಿತಿಯ ಸದಸ್ಯರಾಗಿ ಸೇವೆ. 2016ರಿಂದ 2019ರವರೆಗೆ ಕಲ್ಬುರ್ಗಿಯ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾನಿಲಯದ ಕಾರ್ಯಕಾರಿ ಸಮಿತಿಯ ಸದಸ್ಯರಾಗಿ ಸೇವೆ.

1998ರಿಂದ 2002ರವರೆಗೆ ಶಿಕಾರಿಪುರ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾಗಿ ಜವಾಬ್ದಾರಿ ನಿರ್ವಹಿಸಿದ ಇವರು 2011ರಿಂದ 2013ರವರೆಗೆ ಸಾರ್ವಜನಿಕ ಗ್ರಂಥಾಲಯದ ಕರ್ನಾಟಕ ರಾಜ್ಯ ಮಟ್ಟದ ಪುಸ್ತಕ ಆಯ್ಕೆ ಸಮಿತಿಯ ಅಧ್ಯಕ್ಷರಾಗಿ ನಾಲ್ಕು ವರ್ಷಗಳ ಕಾಲ ಪುಸ್ತಕ ಆಯ್ಕೆ ಸಮಿತಿಯ ಜವಾಬ್ದಾರಿಯನ್ನು ಸಮರ್ಥವಾಗಿ ನಿಭಾಯಿಸಿದ ಇವರು ಪುಸ್ತಕ ಆಯ್ಕೆಯ ಪ್ರಕ್ರಿಯೆಗೊಂದು ಪಾರದರ್ಶಕತೆ ಹಾಗೂ ಶಿಸ್ತನ್ನು ತಂದರೆಂಬುದು ಪ್ರಕಾಶಕರ ವಲಯದಲ್ಲಿ ಕೇಳಿಬರುವ ಮಾತು.

ಬೆಂಗಳೂರಿನ ಮಿಥಿಕ್ ಸೊಸೈಟಿಯು 2009ರಲ್ಲಿ ಇವರಿಗೆ 'ಯುವ ಪ್ರತಿಭಾ ಪುರಸ್ಕಾರ'ವನ್ನು ನೀಡಿ ಗೌರವಿಸಿದೆ. ಚನ್ನಗಿರಿ ತಾಲ್ಲೂಕು ಕನ್ನಡ ಸಾಹಿತ್ಯ ಪರಿಷತ್ತು ಇವರನ್ನು 02–02–2019ರಂದು ಪಾಂಡೋಮಟ್ಟಿಯಲ್ಲಿ ನಡೆದ 16ನೆಯ ತಾಲ್ಲೂಕು ಸಾಹಿತ್ಯ ಸಮ್ಮೇಳನಾಧ್ಯಕ್ಷರಾಗಿ ಆಯ್ಕೆ ಮಾಡಿ ಗೌರವಿಸಿದೆ.

**ಪ್ರಕಟಣೆಗಳು :**

ಪದವಿವರಣಕೋಶ (ಡಾ. ಪಿ.ಕೆ. ರಾಜಶೇಖರ ಅವರೊಂದಿಗೆ) ಚೇತನ ಚಿತ್ತಾರ, ಬೆಟ್ಟದ ಮುಡಿಗೆ ಹೂವು (ಕವನ ಸಂಕಲನ), ದೇವರ ದಾಸಿಮಯ್ಯ ಮತ್ತು ಅನಂತತೆ, ಒಲುಮೆಯ ಕುಲುಮೆಯಲ್ಲಿ, ಪಿ. ಲಂಕೇಶ್, ಡೆಪ್ಯುಟಿ ಚೆನ್ನಬಸಪ್ಪ, ಶಿಕಾರಿಪುರ ತಾಲ್ಲೂಕಿನ ಸಾಂಸ್ಕೃತಿಕ ಸಂಕಥನ (ಸಂಶೋಧನೆ), ಕಾಯಕ ಮೀಮಾಂಸೆ, ಕನ್ನಡ ಭಾಷೆಯ ಚರಿತ್ರೆ, ದೇವರ ದಾಸಿಯಮಯ್ಯ ಜೇಡರ ದಾಸಿಮಯ್ಯ ಬೇರೆ ಬೇರೆಯಲ್ಲ (ಸಂಶೋಧನೆ) ಸ್ವಾಮಿ ವಿವೇಕಾನಂದರ ದೃಷ್ಟಿಯಲ್ಲಿ ವ್ಯಕ್ತಿ–ಸಮಾಜ–ರಾಷ್ಟ್ರ, ವಚನಗಳಲ್ಲಿ ಸ್ಥಾವರ–ಜಂಗಮ, ವಿಶ್ವಜ್ಞಾನ ಯೋಗಿ ಡಾ. ಬಿ.ಆರ್. ಅಂಬೇಡ್ಕರ್, ಸಮರಸದ ಜೀವಸೆಲೆ. ಯುವಜನರು ಗುರುಗಳಾದ ಭಾರತ ಜಗದ್ಗುರುವಾಗುತ್ತದೆ, ವೀರಶೈವ ಲಿಂಗಾಯತ ಬೇರೆ ಬೇರೆಯೇ? (ಸಂಶೋಧನೆ) ಮೊದಲಾದ 17 ಕೃತಿಗಳನ್ನು ರಚಿಸಿ ಪ್ರಕಟಿಸಿರುತ್ತಾರೆ.

**ಸಂಪಾದನೆಗಳು :**

ಬಿ.ವಿ. ವಸಂತಕುಮಾರ್ ಅವರ ತಂದೆಯವರಾದ ಬಿ. ವೀರಭದ್ರಪ್ಪ ಅವರು ಬರೆದಿರುವ ಜೋಗೇರ ಹುಡುಗಿ (ಕಾದಂಬರಿ) ಸಹಕಾರ ಚಳವಳಿ (ಲೇಖನಗಳು) ಪಂಪ ಪದಪ್ರಪಂಚ ಭಾಗ–1 ಮತ್ತು ಭಾಗ–2 (ಸಂಶೋಧನೆ), ಕಾವ್ಯ ಪ್ರಪಂಚ (ಸಮಗ್ರ ಕಾವ್ಯ) ಗುಪ್ತಗಾಮಿನಿ (ನಾಟಕ) ಶರಣು ಶರಣಾರ್ಥಿ (ನಾಟಕ) ದುರ್ಯೋಧನನ್ (ಪಂಪಭಾರತ ಆಧಾರಿತ ನಾಟಕ)ಗಳನ್ನು ಸಂಪಾದಿಸಿ ಪ್ರಕಟಿಸಿದ್ದಾರೆ. ಕುವೆಂಪು ವಿಶ್ವವಿದ್ಯಾನಿಲಯದ ಪ್ರಾಚೀನ ಕನ್ನಡ ಕಾವ್ಯ ಭಾಗ–3 ಪಠ್ಯಪುಸ್ತಕಗಳನ್ನು ಡಾ. ಸಿ.ಎಂ. ವಿಶ್ವನಾಥಯ್ಯ ಅವರೊಡನೆ ಸಂಪಾದಿಸಿದ್ದಾರೆ.

ಇವರ 40ಕ್ಕೂ ಹೆಚ್ಚು ಸಂಶೋಧನಾ ಲೇಖನಗಳು ವಿವಿಧ ಪತ್ರಿಕೆಗಳು ಹಾಗೂ ಪುಸ್ತಕಗಳಲ್ಲಿ ಪ್ರಕಟವಾಗಿವೆ. ಇವರು 80ಕ್ಕೂ ಹೆಚ್ಚು ರಾಷ್ಟ್ರೀಯ, ರಾಜ್ಯ ಹಾಗೂ ವಿಶ್ವವಿದ್ಯಾನಿಲಯ ಮಟ್ಟದ ವಿಚಾರಸಂಕಿರಣ, ಕಾರ್ಯಗಾರ, ಕಮ್ಮಟಗಳಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಭಾಗವಹಿಸಿದ್ದಾರೆ. ವಿದ್ಯಾರ್ಥಿ ದೆಸೆಯಿಂದಲೂ ಸಾಹಿತ್ಯ ಸಂಸ್ಕೃತಿಯಲಿ ಆಸಕ್ತಿಯುಳ್ಳ ಇವರು ಪಿ.ಯು.ಸಿ.ಯಿಂದಲೂ ಅಖಿಲ ಭಾರತೀಯ ವಿದ್ಯಾರ್ಥಿ ಪರಿಷತ್ತಿನ ಕಾರ್ಯಕರ್ತರಾಗಿ ವಿದ್ಯಾರ್ಥಿ ಆಂದೋಲನಗಳಲ್ಲಿ ರಚನಾತ್ಮಕ ಕಾರ್ಯದಲ್ಲಿ ಭಾಗಿಯಾಗಿದ್ದರು. ಹಾಗೂ ರಾಜ್ಯ ಉಪಾಧ್ಯಕ್ಷರಾಗಿ, ರಾಜ್ಯಾಧ್ಯಕ್ಷರಾಗಿ, ರಾಷ್ಟ್ರೀಯ ಉಪಾಧ್ಯಕ್ಷರಾಗಿ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದ್ದಾರೆ. ಸಾಹಿತ್ಯ, ಶಿಕ್ಷಣ, ಸಂಸ್ಕೃತಿ ಹಾಗೂ ಸಾಮಾಜಿಕ ಸಾಮರಸ್ಯ ಇವರ ವಿಶೇಷ ಆಸಕ್ತಿಯ ಕ್ಷೇತ್ರಗಳಾಗಿವೆ. ※